# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಬಿ.ಟಿ.ಎಂ ಲೇಔಟ್ ಉಪ-ವಿಭಾಗದ ವಾರ್ಡ್ ಸಂಖ್ಯೆ-189 ಎಸ್.ಜಿ.ಪಾಳ್ಯ
## ಕಛೇರಿಯಲ್ಲಿ ದಿನಾಂಕ: 17.12.2022 ರಂದು ನಡೆದ ವಾರ್ಡ್ ಸಮಿತಿ ಸಭೆಯ ನಡುವಳಿಗಳು

* * * * * *

ದಿನಾಂಕ-17-12-2022 ರಂದು ನಡೆಸಲಾದ ವಾರ್ಡ್ ಮಟ್ಟದ ಸಾರ್ವಜನಿಕರ ಕುಂದು ಕೊರತೆಗಳನ್ನು ನಿವಾರಿಸುವ ನಿಟ್ಟಿನಲ್ಲಿ ಮತ್ತು ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸುವ ಸಂಬಂಧ ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲಾಗಿ ಮೊದಲಿಗೆ ಹಾಜರಿದ್ದ, ಹೊಸದಾಗಿ ನಿಯೋಜನೆಗೊಂಡಿರುವ ಅಧ್ಯಕ್ಷರಿಗೆ ಸ್ವಾಗತವನ್ನು ಕೋರುತ್ತಾ ಹಾಗೂ ಸಭೆಗೆ ಹಾಜರಾದ ಎಲ್ಲಾ ಇಲ್ಲಾಖೆಯ ಅಧಿಕಾರಿ ವರ್ಗದವರಿಗೆ ಮತ್ತು ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

ಸಭೆಯನ್ನು ಪ್ರಾರಂಭಿಸುತ್ತಾ, ಮೊದಲಿಗೆ ಸಭೆಗೆ ಹಾಜರಿದ್ದ ಎಲ್ಲಾ ಇಲಾಖೆಯ ಅಧಿಕಾರಿಗಳು/ಸಿಬ್ಬಂದಿವರ್ಗ ಮತ್ತು ವಾರ್ಡ್ ಸದಸ್ಯರನ್ನು ಪರಿಚಯ ಮಾಡುತ್ತಾ, ಸದರಿ ವಾರ್ಡ್‌ನ ಎಲ್ಲಾ ಕುಂದುಕೊರತೆಗಳನ್ನು ಇಲಾಖೆವಾರು ಚರ್ಚಿಸಿ ಬಗೆಹರಿಸಿಕೊಳ್ಳಲು ಅಧ್ಯಕ್ಷರು ಸಲಹೆಯನ್ನು ನೀಡಿರುತ್ತಾರೆ. ಈ ಕುರಿತಂತೆ ಈ ಕೆಳಕಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಚರ್ಚಿಸಿ ಪರಿಹರಿಸುವ ಬಗ್ಗೆ ಕೈಗೊಳ್ಳುವ ಕ್ರಮಗಳ ಬಗ್ಗೆ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

ಸಭೆಗೆ ಹಾಜರಿದ್ದ ಅಧಿಕಾರಿ ವರ್ಗ/ ಸದಸ್ಯರು

| ಕ್ರಮ .ಸಂ | ಹೆಸರು | ಮೊಬೈಲ್ ಸಂಖ್ಯೆ |
|---|---|---|
| ೦೧ | ಶ್ರೀ.ಅಶೋಕ್.ಎಸ್.ಬಿರಾದಾರ ಸಹಾಯಕ ಕಾರ್ಯಪಾಲಕ ಅಭಿಯಂತರರು ಬಿ.ಟಿ.ಎಂ ಲೇಔಟ್ ಉಪವಿಭಾಗ | 9008658224 |
| ೦೨ | ಶ್ರೀ.ಸತೀಶ್.ಡಿ ಸಹಾಯಕ ಅಭಿಯಂತರರು ವಾರ್ಡ್152 ಎಸ್.ಜಿ.ಪಾಳ್ಯ | 9480688152 |
| ೦೩ | ಶ್ರೀ.ಅಜಯ್‌ಕುಮಾರ್ ಕಿರಿಯ ಆರೋಗ್ಯ ಪರಿವೀಕ್ಷಕರು | 9632222304 |
| ೦೪ | ಶ್ರೀ. ಮಲ್ಲಿಕಾರ್ಜುನ್ ಬಿರಾದರ ಹಿರಿಯ ಆರೋಗ್ಯ ಪರಿವೀಕ್ಷಕರು | 9945042307 |
| ೦೫ | ಶ್ರೀ.ಸುರೇಶ್ ಎ.ಎಸ್.ಐ ಎಸ್.ಜಿ.ಪೋಲೀಸ್ ಠಾಣೆ | 8123010522 |
| ೦೬ | ಶ್ರೀ.ಅಕ್ಷಯ ಮಾರ್ಷ್‌ಲ್ | 8880118965 |
| ೦೭ | ಶ್ರೀ.ಡಾ॥ ಗೌತಮ್ ಪ್ರಕಾಶ್ ಹೆಚ್ ಮೆಡಿಕಲ್ ಆಫಿಸರ್ | 9986000094 |
| ೦೮ | ಶ್ರೀ.ಮುನಿಂದ್ರ ಮೇಲ್ವಿಚಾರಕರು ಘ.ತ್ಯಾನಿ | 9901002067 |
| ೦೯ | ಶ್ರೀ ರಮೇಶ್ ಸದಸ್ಯರು | 9731108622 |
| ೧೦ | ಶ್ರೀ.ಗಂಗಾದ್ರೀ ಮೇಲ್ವಿಚಾರಕರು ಘ.ತ್ಯಾನಿ | 9980225272 |
| ೧೧ | ಶ್ರೀ.ಎನ್.ಲೋಕೇಶ್ ಸದಸ್ಯರು | 9448579144 |
| ೧೨ | ಶ್ರೀಮತಿ.ಭೂದೇವಿ ಕೆಲಸ ಪರಿವೀಕ್ಷರು ತೋಟಗಾರಿಕೆ ಇಲಾಖೆ | 9740903427 |
| ೧೩ | ಶ್ರೀ.ವೀರುಪಾಕ್ಷಿ.ವಿ. ಎ.ಎಸ್.ಐ ಮಡಿವಾಳ ಪೋಲೀಸ್ ಠಾಣೆ | 8310086006 |
| ೧೪ | ಶ್ರೀ ಯಶವಂತ.ಎನ್ ಕೆಲಸ ಪರಿವೀಕ್ಷಕರು ಬಿ.ಡಬ್ಲೂ.ಎಸ್.ಎಸ್.ಬಿ | 9611918180 |
| ೧೫ | ಶ್ರೀ.ಬಿ.ಟಿ.ಕೃಷ್ಣಮೂರ್ತಿ ಸದಸ್ಯರು | 9902552550 |
| ೧೬ | ಶ್ರೀ.ಸೈಯದ್ ನಜರುದ್ದೀನ್ | 9741518897 |

1) ಶ್ರೀ ಬಿ.ಟಿ.ಕೃಷ್ಣಮೂರ್ತಿರವರು ಮಾತನಾಡಿ, ಬಾಲಾಜಿನಗರ 5ನೇ ಮತ್ತು 7ನೇ ಮುಖ್ಯರಸ್ತೆಯ ಡಾಂಬರೀಕರಣ ಕಾಮಗಾರಿ ಇನ್ನೂ ಪ್ರಾರಂಭವಾಗಿರುವುದಿಲ್ಲ ಅಲ್ಲಿನ ವಾಹನ ಸವಾರರಿಗೆ ತುಂಬತೊಂದರೆಯಾಗುತ್ತಿದೆ ಎಂದು ಸಭೆಗೆ ತಿಳಿಸಿದರು. ಈ ಬಗ್ಗ ಸಭೆಗೆ ಹಾಜರಿದ್ದ ವಾರ್ಡ್ ಅಭಿಯಂತರರಾದ ಶ್ರೀ ಸತೀಶ್.ಡಿ ರವರು ಮಾತನಾಡಿ ಪ್ರಸ್ತಾಪಿತ ರಸ್ತೆಗಳ ಕಾಮಗಾರಿ ಪ್ರಾರಂಭವಾಗಿದ್ದು, ಹಾಲಿ ಬಿ.ಟಿ.ಎಂ ಲೇಔಟ್‌ನಲ್ಲಿ ಪ್ರಗತಿಯಲ್ಲಿರುತ್ತದೆ. ಇದಾದನಂತರ ಕಾಮಗಾರಿಯನ್ನು ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.

2) ಶ್ರೀ ಲೋಕೆಶ್ ಎನ್ ರವರು ಮಾತನಾಡಿ, ಚಿಕ್ಕಾಡುಗೋಡಿಯ 1ನೇ ಮುಖ್ಯರಸ್ತೆಯಲ್ಲಿನ ಚರಂಡಿಯು ಹೂಳು ತುಂಬಿಕೊಂಡು ಚರಂಡಿ ನೀರಿ ಸರಾಗವಾಗಿ ಹರಿಯದೇ ರಸ್ತೆಯ ಮೇಲೆ ಹರಿದು ತುಂಬ ತೊಂದರೆಯಾಗುತ್ತಿರುತ್ತದೆ ಎಂದು ಸಭೆಗೆ ತಿಳಿಸಿದರು. ಈ ಸಂಬಂಧ ವಾರ್ಡ್ ಅಭಿಯಂತರರು ಮಾತನಾಡಿ ಕೂಡಲೇ ಸದರಿ ಚರಂಡಿಯ ಹೂಳನ್ನು ತೆರವುಗೊಳಿಸುವ ಕ್ರಮವನ್ನು ಕೈಗೊಳ್ಳಲಾಗುವುದು ಎಂದು ಸಭೆಗೆ ತಿಳಿಸಿದರು.

3) ಶ್ರೀ ಬಿ.ಟಿ ಕೃಷ್ಣಮೂರ್ತಿರವರು ಮಾತನಾಡಿ, ವಾರ್ಡ್‌ವ್ಯಾಪ್ತಿಯ ಓಎಫ್‌ಸಿ ಕೇಬಲ್‌ಗಳು ಸಡಿಲವಾಗಿ ಕೆಳಭಾಗದಲ್ಲಿ ನೇತಾಡುತ್ತಿರುವುದು ಮತ್ತು ಸರಳವಾಗಿ ಕೈಗೆ ತಾಗುವಂತೆ ಕಂಡುಬಂದಿರುತ್ತದೆ ಸದರಿ ರಸ್ತೆಯಲ್ಲಿನ ಬೃಹತ್ ಗಾತ್ರದ ವಾಹನಗಳು ಸಂಚಾರಿಸುವ ವೇಳೆ ಅವಘಡವಾಗುವ ಸಂಬವವಿರುತ್ತದೆ. ಆದುದರಿಂದ ನೇತಾಡುತ್ತಿರುವ ಕೇಬಲ್‌ಗಳನ್ನು ಸರಿಪಡಿಸಲು ಸಭೆಗೆ ತಿಳಿಸಿದರು. ಈ ಬಗ್ಗೆ ಸಭೆಗೆ ಹಾಜರಿದ್ದ ವಾರ್ಡ್ ಅಭಿಯಂತರರು ಕೂಡಲೇ ಸದರಿ ಕೇಬಲ್‌ಗಳನ್ನು ಕತ್ತರಿಸಿ ತೆರವುಗೊಳಿಸಲಾಗುವುದು ಎಂದು ಸಭೆಗೆ ತಿಳಿಸಿದರು.

4) ಇದರ ಜೊತೆಯಲ್ಲಿಯೇ ಬಿ.ಟಿ ಕೃಷ್ಣಮೂರ್ತಿರವರು ಮಾತನಾಡಿ, ವಾರ್ಡ್ ವ್ಯಾಪ್ತಿಯ ಪ್ರದೇಶ ಎಲ್ಲಂದರಲ್ಲಿ ಬ್ಯಾನರ್ ಮತ್ತು ಬಂಟಿಂಗ್ಸ್ ಅಳವಡಿಸಿರುವುದು ಕಂಡುಬಂದಿರುತ್ತದೆ ಇದರಿಂದಾಗಿ ವಾರ್ಡ್ ಸೌಂಧರ್ಯಿಕರಣ ಹಾಳಾಗುತ್ತಿರುತ್ತದೆ. ಆದುದರಿಂದ ಬ್ಯಾನರ್‌ಗಳನ್ನು ತೆರವುಗೊಳಿಸುವ ಕ್ರಮವಹಿಸ ಬೇಕೆಂದು ಸಭೆಗೆ ತಿಳಿಸಿದರು. ಈ ಸಂಬಂಧ ಮಾನ್ಯ ಸಭಾಧ್ಯಕ್ಷರು ವಾರ್ಡ್ ಅಭಿಯಂತರವರನ್ನು ಉದ್ದೇಶಿಸಿ ಮಾತನಾಡಿ ಕೂಡಲೇ ಎಲ್ಲಾ ಬ್ಯಾನರ್‌ಗಳನ್ನು ಕೂಡಲೇ ತೆರವುಗೊಳಿಸಬೇಕೆಂದು ಸೂಚಿಸಿದರು.

5) ಶ್ರೀ.ಸೈಯದ್ ನಜುರುದ್ದಿನ್‌ರವರು ಮಾತನಾಡಿ 6ನೇ ಅಡ್ಡರಸ್ತೆ ಬಾಲಾಜಿನಗರ ಸುತ್ತಮುತ್ತಲಿನ ಪ್ರದೇಶದಲ್ಲಿ ಅನುಪಯುಕ್ತ ಕಸ ಮತ್ತು ತ್ಯಾಜ್ಯ ಹಾಕುತ್ತಿರುವುದು ಹಾಗೂ ಸರಿಯಾಗಿ ಸಮರ್ಪಕವಾಗಿ ತ್ಯಾಜ್ಯ ವಿಲೇವಾರಿಯಾಗುತ್ತಿರುವುದಿಲ್ಲ ಎಂದು ಸಭೆಗೆ ತಿಳಿಸಿದರು. ಈ ಸಂಬಂಧ ಸಭೆಗೆ ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷರು ಮಾತನಾಡಿ ಕೂಡಲೇ ತ್ಯಾಜ್ಯವನ್ನು ವಿಲೇವಾರಿ ಮಾಡಲು ಕ್ರಮವಿಸುವುದಾಗಿ ತಿಳಿಸಿದರು.

6) ಮಾನ್ಯ ಅಧ್ಯಕ್ಷರು ಮಾತನಾಡಿ, ವಾರ್ಡ್ ವ್ಯಾಪ್ತಿಯ ಘನತ್ಯಾಜ್ಯ ನಿರ್ವಹಣೆ ಬಗ್ಗೆ ಪ್ರಸ್ತಾಪಿಸಲಾಗಿ, ಶ್ರೀ ಅಜಯ್ ಕಿರಿಯ ಆರೋಗ್ಯ ಪರಿವೀಕ್ಷರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಒಣತ್ಯಾಜ್ಯ ಮತ್ತು ಹಸಿ ತ್ಯಾಜ್ಯ ಸಮರ್ಪಕವಾಗಿ ಸಂಗ್ರಹಿಸಿ ವಿಲೇವಾರಿ ಮಾಡಲಾಗುತ್ತಿರುತ್ತದೆ ಮತ್ತು ಬ್ಲಾಕ್ ಸ್ಪಾಟ್‌ಗಳ ಸಂಖ್ಯೆಗಳು ಆದಷ್ಟು ಕಡಿತಗೊಳಿಸಲು ಶ್ರಮವಹಿಸಲಾಗುತಿರುತ್ತದೆ ಎಂದು ಸಭೆಗೆ ತಿಳಿಸಿದರು.

ಕೊನೆಯದಾಗಿ ಸಭೆ ಅಧ್ಯಕ್ಷರು ಮಾತನಾಡಿ, ಮುಂಬರುವ ಹೊಸ ವರ್ಷದ ಶುಭಾಷಯಗಳನ್ನು ತಿಳಿಸುತ್ತಾ ಈ ಮೇಲ್ಕಂಡ ಎಲ್ಲಾ ವಿಷಯಗಳನ್ನು ಹಾಗೂ ಸಮಸ್ಯೆಗಳನ್ನು ಬರುವ ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಶ್ರೀ. ಸತೀಶ್.ಡಿ)
ಕಾರ್ಯದರ್ಶಿಗಳು
ವಾರ್ಡ್–152 ಎಸ್.ಜಿ.ಪಾಳ್ಯ

(ಶ್ರೀ. ಅಶೋಕ್.ಎಸ್.ಬಿರಾದಾರ)
ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು
ವಾರ್ಡ್–152 ಎಸ್.ಜಿ.ಪಾಳ್ಯ

ಪ್ರತಿಯನ್ನು:

1. ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ದಕ್ಷಿಣ) ರವರ ಅವಗಾಹನೆಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿ.ಟಿ.ಎಂ.ಲೇಔಟ್ ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೋರಮಂಗಲ ಉಪ–ವಿಭಾಗ ರವರಿಗೆ ಮುಂದಿನ ಕ್ರಮಕ್ಕೆ.
9. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ರವರಿಗೆ ಮುಂದಿನ ಕ್ರಮಕ್ಕೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ಜಲಮಂಡಳಿ, ಬಿ.ಟಿ.ಎಂ ರವರಿಗೆ ಮುಂದಿನ ಕ್ರಮಕ್ಕೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು, ರಸ್ತೆ ಮೂಲಭೂತ ಸೌಕರ್ಯ(ದ) ರವರಿಗೆ ಮುಂದಿನ ಕ್ರಮಕ್ಕೆ.